ಮಳೆಯ ದಿನಗಳ ಕಾವು ಕಡಿಮೆಯಾಗುವುದರ ಜೊತೆಗೇ ಚಾರಣಿಗರ ಕನಸುಗಳೂ ಚಿಗುರತೊಡಗುತ್ತವೆ. ಮಳೆಯಿಂದಾಗಿ ಮದುವಣಗಿತ್ತಿಯಂತೆ ಕಂಗೊಳಿಸುವ ಕಾಡು ಹಾಗೂ ಹಸುರು ಪತ್ತಲವುಟ್ಟಂತೆ ಕಾಣಿಸುವ ಬೆಟ್ಟ–ಗುಡ್ಡಗಳ ಹಾದಿಗಳು ಚಾರಣಿಗರನ್ನು ಸೆಳೆಯತೊಡಗುತ್ತವೆ. ಮೋಡ ಮತ್ತು ಬಿಸಿಲಿನ ಕಣ್ಣಾಮುಚ್ಚಾಲೆಯ ದಿನಗಳಲ್ಲಿ ಕಾಡುಮೇಡಿನ ದಾರಿಯಲ್ಲಿ ಅಲೆದಾಡುವ ಅನುಭವ ದಣಿದ ಮೈಮನಗಳಿಗೆ ಪುನಶ್ಚೇತನ ತುಂಬುವ ಮದ್ದಿನಂತೆ ಕೆಲಸ ಮಾಡಬಲ್ಲದು.

ಚಾರಣಿಗರ ಪಾಲಿಗೆ ಪಶ್ಚಿಮಘಟ್ಟ ಚುಂಬಕವಿದ್ದಂತೆ. ಕಾಡು, ನಾಡು ಮತ್ತು ಕಡಲುಗಳ ಕರಾವಳಿಯ ಪರಿಸರ ಚಾರಣಿಗರಿಗೆ ಅಚ್ಚುಮೆಚ್ಚು. ಕಾಡು ಮೌನವಾಗಿದ್ದರೆ ನಾಡು ಸದಾ ಗಜಿಬಿಜಿ. ನಾಡಿನ ಗದ್ದಲದಿಂದ ದೂರವಾಗಲು ಕಾಡಿಗೆ ಬರುವವರು, ತಮ್ಮೊಂದಿಗೆ ಗದ್ದಲವೂ ಪ್ರವೇಶಿಸದಂತೆ ಎಚ್ಚರವಹಿಸುವುದು ಅತ್ಯಗತ್ಯ. ವ್ಯಾಪಾರ ವ್ಯವಹಾರ ಅಥವಾ ನೌಕರಿಯ ಒತ್ತಡಗಳು, ನಗರದಲ್ಲಿ ಟ್ರಾಫಿಕ್ ಉಂಟುಮಾಡುವ ದಣಿವು – ಇವುಗಳಿಂದ ಪಾರಾಗಿ ನೆಮ್ಮದಿಗಾಗಿ ನಗರದ ಜನರು ತಮ್ಮ ಕಣ್ಣು ಹೊರಳಿಸುವುದು ಕಾಡು, ಬೆಟ್ಟಗಳತ್ತ.


ಬಾಗಿಲೊಳು ಕೈಮುಗಿದು ಒಳಗೆ ಬಾ ಯಾತ್ರಿಕನೆ ಎನ್ನುವ ಕುವೆಂಪು ಅವರ ಕವಿತೆಯ ಸಾಲು ಪಶ್ಚಿಮಘಟ್ಟದ ಪ್ರವೇಶಕ್ಕೂ ಅನ್ವಯಿಸುತ್ತದೆ. ಕಾಡು–ಘಟ್ಟದ ಜೀವವೈವಿಧ್ಯ ಸೂಕ್ಷ್ಮ ಪರಿಸರದಲ್ಲಿ ಚಾರಣ ಕೈಗೊಳ್ಳುವಾಗ ನಮ್ಮ ಉತ್ಸಾಹ ಕಾಡಿನ ನೀತಿಗೆ ಧಕ್ಕೆಯಾಗದಂತೆ ಇರುವುದು ಅಗತ್ಯ.

## ಪ್ರಕೃತಿಯೊಂದಿಗಿನ ಸಂವಾದ

ಕಾಡು ಸುತ್ತಿ, ಬೆಟ್ಟ ಹತ್ತುವುದನ್ನು ಅನೇಕರು ಚಾರಣವೆಂದು ಅರ್ಥೈಸುತ್ತಾರೆ. ಮತ್ತೆ ಕೆಲವರ ಪಾಲಿಗೆ ಚಾರಣವೆನ್ನುವುದು ಮೋಜಿನ ಒಂದು ಅವಕಾಶ. ಹೌದು, ಚಾರಣವೆನ್ನುವುದು ಕಾಡುಮೇಡುಗಳಲ್ಲಿನ ಅಲೆದಾಟವೂ ಹೌದು, ಮನರಂಜನೆಯೂ ಹೌದು. ಆದರೆ, ಅದಷ್ಟೇ ಚಾರಣವಲ್ಲ. ಸಾಹಸಕ್ರೀಡೆಯ ರೂಪದ ಚಾರಣ ನಾವು ಪರಿಸರದೊಂದಿಗೆ ನಿಕಟ ಸಂಪರ್ಕವನ್ನು ಸಾಧಿಸುವ ಅವಕಾಶವೂ ಹೌದು. ರಂಜನೆಯ ಜೊತೆಗೆ ಬೋಧನೆಯೂ ಚಾರಣದಲ್ಲಿ ಲಭ್ಯ. ನಡೆಯುತ್ತಾ ನಡೆಯುತ್ತಾ ಅರಿಯುವ ಅವಕಾಶ ಇಲ್ಲಿಯದು. ಶಿಖರವೇರುವ ಮೂಲಕ ಗಿರಿಕಾನನದ ಅದ್ಭುತ ಪರಿಸರವನ್ನು ಸವಿಯುವುದರ ಜೊತೆಗೆ, ಮನುಷ್ಯರ ಹಸ್ತಕ್ಷೇಪದಿಂದಾಗಿ ಪ್ರಕೃತಿಯಲ್ಲಿ ಆಗುತ್ತಿರುವ ಬದಲಾವಣೆಗಳನ್ನೂ ತಿಳಿದುಕೊಂಡಾಗ ಚಾರಣ ಅರ್ಥಪೂರ್ಣವಾಗಬಲ್ಲದು.

ನಾನು ಆ ಬೆಟ್ಟ ಏರಿದ್ದೇನೆ, ಈ ಕಾನನ ಸುತ್ತಿದ್ದೇನೆ ಎಂದು ಚಾರಣಕ್ಕೆ ಹೋದವರು ಹೇಳಿಕೊಳ್ಳುವುದಿದೆ. ಆದರೆ ಆ ಏರುವಿಕೆ ಹಾಗೂ ಸುತ್ತಾಟದಿಂದ ಕಲಿತಿದ್ದೇನು ಎನ್ನುವುದರ ಬಗ್ಗೆ ಹೇಳುವವರು ಕಡಿಮೆ. ಪಶ್ಚಿಮಘಟ್ಟದ ರಮಣೀಯ ದೃಶ್ಯಗಳು ನಮ್ಮ ಕಣ್ಣಿಗೆ ಕಾಣುವಂತಹವು. ಆದರೆ, ಆ ರಮಣೀಯತೆಯ ಹಿನ್ನೆಲೆಯಲ್ಲಿ ಇರುವ ತಲ್ಲಣಗಳನ್ನು ಅರ್ಥ ಮಾಡಿಕೊಳ್ಳುವ ವ್ಯವಧಾನ ಹಾಗೂ ಅಂತಃಕರಣ ನಮಗೆ ಬೇಕು. ಬೆಟ್ಟದ ಮೇಲಿನ ತಂಗಾಳಿಯನ್ನು ಅನುಭವಿಸುವುದರ ಜೊತೆಗೆ, ಆ ಪರಿಸರ ಮುಂದಿನ ಪೀಳಿಗೆಗೂ ಉಳಿಯುವಂತಾಗುವ ನಿಟ್ಟಿನಲ್ಲಿ ನಮ್ಮ ಜವಾಬ್ದಾರಿಯೇನು ಎನ್ನುವ ಚಿಂತನೆ ನಮ್ಮ ಮನಸ್ಸಿಗೆ ಬರಬೇಕು. ಅಡವಿಯೆಡೆಯಲಿ ಗಿಡಗಳ ನಡುವಲಿ ನೊರೆಯನು ಪುಟಿಸುತ್ತಾ ಕುಣಿ ಕುಣಿದಾಡುವ ಹರಿಯುವ ನೀರಿನ ಜುಳು ಜುಳು ನಾದ ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತದೆ. ಆ ಮೋಹನ ಮುರಳಿಯ ಜೊತೆಗೆ, ‘ಎಲ್ಲೋ ಮಗು ಅಳುತಾ ಇದೆ’ ಎಂದು ಆಲಿಸುವ ಕವಿಹೃದಯವೂ ಓರ್ವ ಮಾದರಿ ಚಾರಣಿಗನಿಗೆ ಇರಬೇಕು.

ಬೆನ್ನಿಗೆ ಡುಬ್ಬ ಏರಿಸಿದವರೆಲ್ಲರೂ ನೈಜ ಚಾರಣಿಗರಾಗಿರುವುದಿಲ್ಲ. ಮೋಜು, ಕುಡಿತ, ಕುಣಿತ, ಬೊಬ್ಬೆ, ಗೌಜಿಯನ್ನೇ ಚಾರಣದ ಉದ್ದೇಶವಿಟ್ಟುಕೊಂಡು ಬರುವವರು ಪ್ರಕೃತಿಗೆ ಮಾರಕ. ಗಂಡುಗಲಿಗಳಾಗಿ ಬಂದು ಅಡವಿಯೊಳಗೆ ‘ಗುಂಡುಗಲಿ’ಗಳಾಗಿ ಪ್ಲಾಸ್ಟಿಕ್, ಇತರೆ ತ್ಯಾಜ್ಯವನ್ನು



ನಡೆದಷ್ಟೂ ದಾರಿ ದೂರ
ಬಯಲದಾಟಿ ಗಿರಿಯನೇರಿ
ಗಾಳಿಗಾನಕೆ ಮೈಯೊಡ್ಡುವ ಬಾರಾ
ಚಿತ್ರ: ದಿನೇಶ್ ಹೊಳ್ಳ



ಅಂಬರದಿಂದಲೆ ಸುರಿಯುತಿದೆ ಪುಳಕದ ಮಳೆ
ಚಿತ್ರ: ದಿನೇಶ್ ಹೊಳ್ಳ